ಮನೆಯ ಗ್ಯಾರೇಜಿನಲ್ಲಿ ಇರುವುದು ನಾಲ್ಕು ಕಾರು. ಎರಡಕ್ಕೆ ಡ್ರೈವರ್, ಇನ್ನೆರಡು ಇವರದು. ಕಾರುಗಳ ಹುಚ್ಚು ಇವರಿಗೆ. ಎರಡು ಮೂರು ವರ್ಷಕ್ಕೆ ಬದಲಿಸುವ ಖಯಾಲಿ ಬೇರೆ. ಸದ್ಯದ ದೊಡ್ಡ ಗಾಡಿ ಟೊಯೋಟಾ ಪ್ರಾಡಾ... ಬೆಂಗಳೂರಿಗೂ ಡ್ರೈವ್ ಮಾಡಿಕೊಂಡು ಹೋಗ್ತಾರೆ.

ಹತ್ತು..

ಛ್ಞಂ.. ಹೂಂ.. ಹತ್ತಿ ಬಾಗಿಲು ಹಾಕಿದೆ. ಘಮ್ಮೆನ್ನುವ ಸುಗಂಧ ಇವರು ಬಳಸುವ ಆಫ್ಟರ್ ಶೇವ್, ಡಿಯೊಡರೆಂಟ್. ಕಾರಿನಲ್ಲಿ ಇರುವ ಎರಡು ಕಾರ್ ಪರ್ಫ್ಯೂಮ್... ಎಲ್ಲಾ ಸೇರಿ ಕೊಂಚ ಉಸಿರು ಕಟ್ಟಿಸುವ ಪರಿಮಳವೇ!.. ಎರಡು ನಿಮಿಷದಲ್ಲಿ ಮಾರ್ಕೆಟ್‌ನಲ್ಲಿ ಇದ್ವಿ.. ಗಾಡಿ ನಿಲ್ಲಿಸಿದಾಗ ಇವರತ್ತ ನೋಡಿದೆ. ವ್ಯಾಯಾಮ, ಡಯಟ್ ಏನೂ ಮಾಡದಿದ್ದರೂ ಫಿಸಿಕ್ ಚೆನ್ನಾಗಿಯೇ ಇಟ್ಟುಕೊಂಡಿದ್ದಾರೆ. ತಲೆಯ ಕೂದಲೂ ವಿರಳವಾಗಿಲ್ಲ.. ಕಣ್ಣಿನ ಚೂಪು ನೋಟವೂ ಮರೆಯಾಗಿಲ್ಲ.

ಏನಿಲ್ಲಿ?.. ಮೆಲ್ಲನೆ ಪ್ರಶ್ನಿಸಿದೆ.

ಶೆಟ್ಟಿ ಫೋನ್ ಮಾಡಿದ್ದ. ಹೊಸ ಡೈಮೆಂಡ್ ಪೆಂಡೆಂಟ್ಸ್ ತರಿಸಿದ್ದಾನಂತೆ... ನಿಂಗೆ ಯಾವುದಾದರೂ ಇಷ್ಟ ಆಗುತ್ತಾ ನೋಡುವಿಯಂತೆ ನಡಿ..

ಬೇಡ.. ಈಗ್ಯಾಕೆ?...

ನನ್ನ ಮಾತು ಕೇಳಲು ಅವರು ಗಾಡಿಯಲ್ಲಿ ಇದ್ದರೆ ತಾನೇ?... ಇಳಿದು ಶೆಟ್ಟರ ಅಂಗಡಿ ಹೊಕ್ಕಿಯಾಗಿತ್ತು. ಅಲ್ಲಿದ್ದವರೆಲ್ಲಾ ಎದ್ದು ಮರ್ಯಾದೆ ತೋರುತ್ತಿದ್ದರು. ಸುನೀಲ್ ಶೆಟ್ಟಿ ತನ್ನ ಸೀಟಿನಿಂದ ಎದ್ದು ಬಂದು ಇವರ ಕೈ ಕುಲುಕುತ್ತಿದ್ದ. ಅವನ ಅಪ್ಪ ರಂಗಾಶೆಟ್ಟಿ.. ಗಲ್ಲಾ ಪೆಟ್ಟಿಗೆಯ ಹಿಂದಿನಿಂದಲೇ ಕೈ ಎತ್ತಿ ಮುಗಿದು ಸ್ವಾಗತ ಕೋರುತ್ತಿದ್ದರು.

ನಿಟ್ಟುಸಿರಿಟ್ಟು ಗಾಡಿಯಿಂದ ಇಳಿದು ಅಂಗಡಿಯತ್ತ ನಡೆದೆ. ಈ ಸಣ್ಣ ರಸ್ತೆಗೆ ಗಾಡಿ ತುಂಬಾ ದೊಡ್ಡದು. ಶೆಟ್ಟರ ಪುಟ್ಟ ಅಂಗಡಿಗೆ ಇವರು ತುಂಬಾ ದೊಡ್ಡವರು.

ಬನ್ನಿ ತಾಯಿ ತುಂಬಾ ಅಪರೂಪ ಆಗ್ಬೋದ್ರಿ.. ಒಡವೆಗಳನ್ನೆಲ್ಲಾ ಈಗ ಬೆಂಗಳೂರಿನಲ್ಲೇ ತೊಗೋತೀರೇನೋ...

ಹಾಗೇನಿಲ್ಲ.. ಒಡವೆ ಮಾಡಿಸಿಕೊಳ್ಳಲು.. ಯಾವುದೇ ಸಂದರ್ಭ ಬಂದಿಲ್ಲ ಅಷ್ಟೇ.. ಈ ಬಗೆಯ ಮಾತು, ದುಡ್ಡಿಗೆ ಮರ್ಯಾದೆ ಕೊಡುವ ದೇಶಾವರಿತನಕ್ಕೆ ಹೊಂದಿಕೊಳ್ಳಲು ಆಗಲೇ ಇಲ್ಲ...

ಹೊಸ ಪ್ಯಾಟರ್ನ್‌ನ ಪೆಂಡೆಂಟುಗಳು... ವಜ್ರ ಗ್ಯಾರಂಟಿ... ತರ್ಸಿದ್ದೇವೆ. ಅದಕ್ಕೆ ಯಾಜಮಾನರಿಗೆ ಫೋನ್ ಮಾಡಿದ್ದು...

ಅರೆನಗೆ ನಕ್ಕು ಇವರ ಪಕ್ಕ ಕುಳಿತೆ. ಈಗ್ಯಾಕೆ?.. ಏನೂ ಬೇಡ.. ಮೆಲ್ಲನೆ ಉಸುರಿದೆ.

ಆದರೆ ಶೆಟ್ಟಿಯ ಕಿವಿ ಬಲು ಚುರುಕು.

ಏನು ತಾಯಿ ಹೀಗಂತೀರಿ?.. ಒಡವೆ ಕೊಡ್ಸಿ ಅಂತ ಹೆಣ್ಣುಮಕ್ಕಳು ತಮ್ಮ ಗಂಡಂದಿರನ್ನು ಗೋಳು ಹೊಯ್ದುಕೊಳ್ತಾರೆ ಅಂತ ಕೇಳಿದ್ದೆ. ನೀವು ನೋಡಿದ್ರೆ, ಬೇಕಾದ್ದು ತೊಗೋ ಅಂತ ಕರ್ಕೊಂಡು ಬಂದಿರೋ ಯಜಮಾನರಿಗೆ, ಈಗ್ಯಾಕೆ? ಬೇಡ ಅಂತಿದ್ದೀರಲ್ಲ.. ಏನನ್ಯಾಯ ಸರ್?.. ನಾವು ಬದುಕೋದು ಬೇಡವೇ..

ಅವನ ಮಾತಿಗೆ ಇವರು ತಲೆ ಹಿಂದೆ ಹಾಕಿ ಜೋರಾಗಿ ನಕ್ಕರು. ಅಕ್ಕಪಕ್ಕ ಇದ್ದವರಿಗೆಲ್ಲಾ ಇವರೆಂಥ ಶ್ರೀಮಂತರು, ಒಳ್ಳೆಯವರು ಎಂಬ ಅರಿವು ಮೂಡಿ ಗೌರವದ ಭಾವ ಮೂಡಿತೇನೋ!..

ನನ್ನ ಮುಂದೆ ವೆಲ್ವೆಟ್ ಟ್ರೇನಲ್ಲಿ ಸುನೀಲ್ ಶೆಟ್ಟಿ ವಜ್ರದ ಪೆಂಡೆಂಟುಗಳನ್ನು ಹರಡಿದ.

ನಿಂಗೊಂದು ಅಮ್ಮನಿಗೊಂದು ಆರಿಸು.. ದೊಡ್ಡ ದನಿಯಲ್ಲಿ ಆದೇಶಿಸಿದರು.

ದೊಡ್ಡಮ್ಮೋರು ಮೊನ್ನೆ ಬಂದು ತೊಗೊಂಡು ಹೋದರು. ಸೊಸೆಗೆ ಹೇಳ್ತೀನಿ. ಅಂದ್ರು ಅವರಿಗೂ ಒಂದು ತೊಗೊಳ್ಳಿ ತಾಯಿ ಅಂದಾಗ!... ನಾವು ಆರಿಸೋದು ಈಗಿನ ಕಾಲದವರಿಗೆ ಇಷ್ಟ ಆಗೋಲ್ಲ.. ಅವಳೇ ಬಂದು ಆರಿಸಿಕೊಳ್ತಾಳೆ ಅಂದ್ರು.. ದೊಡ್ಡಮ್ಮೋರ್ದು ನೋಡಿದ್ರಾ ತಾಯಿ? ಮಧ್ಯೆ ಕೆಂಪು ಸುತ್ತಾ ಒಂದು ಸುತ್ತು ಪಚ್ಚೆ ನಂತರ ವಜ್ರ..

ತಲೆಯಾಡಿಸಿದೆ. ಅತ್ತೆ ನನಗೇನು ತೋರಿಸಿಲ್ಲ.. ಆದ್ರೆ ಈ ಶೆಟ್ಟಿಯ ಮುಂದೆ ನಮ್ಮ ಮನೆ ಸುದ್ದಿ ಯಾಕೆ?...

ತುಂಬಾ ಚೆನ್ನಾಗಿದೆ. ನೀನೂ ಹೋಗು ಅಂದ್ರು ನಂಗೇ ಈಗ ಬೇಡ ಅಂತ... ರೀ...

ಇರ್ಲಿ.. ಒಂದು ತೊಗೋ... ಎಲ್ಲಾ ಒಡವೆ ಜೊತೆ ಇದೂ ಸೇಫಲ್ಲಿ ಇರುತ್ತೆ...

ಇವರ ಮಾತಿಗೆ ನಗುತ್ತಾ ಕನ್ನಡಿಯ ಸ್ಟ್ಯಾಂಡನ್ನು ನನ್ನ ಮುಂದೆ ಇರಿಸಿದ ಶೆಟ್ಟಿ.

ಎಲೆಕ್ಷನ್ ಅಂತೆ ಸಾಹೇಬ್ರೆ?.. ಮರಿಗೌಡ ರಿಸೈನ್ ಮಾಡಿದ್ದು ನಿಮಗಾಗಿದೆಯಂತೆ.

ಎದುರು ಬಟ್ಟೆಯಂಗಡಿಯ ಮಾರ್ವಾಡಿ ಇವರನ್ನು ಮಾತಾಡಿಸಲೇ ಒಳಗೆ ಬಂದ.

ಹೌಂ.... ಮರಿಗೌಡರಿಗೆ ಚೇರ್ಮನ್ ಗಿರಿ ಕೊಡ್ತಾ ಇದಾರೆ, ಹೈ ಕಮಾಂಡಿನವರು. ನೀವು ನಿಂತು ಗೆದ್ದು ಬನ್ನಿ.. ನಿಮ್ಮ ಜಿಲ್ಲೆಗೆ ಹೋಂ ಕೊಡ್ತೀನಿ ಅಂದ್ರು...

ಮತ್ತೆ?!. ನೀವು ಕ್ಯಾಬಿನೆಟ್‌ಗೆ ಹೋದ್ರೆ ಬರೀ ಶಾಸಕರಾಗಿ ಇರೋಕ್ಕೆ ಆಗುತ್ತಾ? ಮಿನಿಸ್ಟರ್‌ಗಿರಿ ಕೂಡಲೇ ಬೇಕು.. ನೀವು ಮಿನಿಸ್ಟರ್ ಆದ್ರೆ ನಮ್ಮ ಊರಿಗೇ ಒಳ್ಳೇದು.. ನಿಂತ್ಕೊಂಡ್ಬಿಡಿ. ನಮ್ಮೆಲ್ಲರ ಬೆಂಬಲ ಇದೆ ನಿಮಗೆ.. ಶೆಟ್ಟರು ದನಿಗೂಡಿಸಿದರು.

ಹೂಂ. ನಿಮ್ಮೆಲ್ಲರ ಬೆಂಬಲ ಬೇಕೇಬೇಕು. ಚೀಫ್ ಮಿನಿಸ್ಟರ‍್ರು ಬೆಳಗ್ಗೆನೂ ಫೋನ್ ಮಾಡಿದ್ರು.. ಮುಂದಿನ ವಾರ ಎಲೆಕ್ಷನ್ ಅನೌನ್ಸ್ ಆಗುವಂತೆ... ಇವರು ಹೇಳಿದಾಗ ಎಲ್ಲರೂ ತಲೆಯಾಡಿಸಿದರು.

ನನಗೆ ಇದು ಸುದ್ದಿ. ಇವರು ರಾಜಕೀಯದಲ್ಲಿ ಮುಳುಗಿ ಹೋಗುವ ದಿನ ದೂರವಿಲ್ಲ... ನನಗೆ ಬೇಡ..

ಯಾವುದಾದರೂ ಸೆಲೆಕ್ಟ್ ಮಾಡಿದ್ಯ?.. ಇಲ್ಲ ಎನ್ನುವಂತೆ ತಲೆಯಾಡಿಸಿದೆ. ಬಂಗಾರ, ವಜ್ರ ಕೊಟ್ಟು ನನ್ನ ಒಪ್ಪಿಸಬಹುದು ಎಂಬುದು ಇವರ ಇಂಗಿತವೇ?... ನನ್ನ ಒಪ್ಪಿಗೆ, ಬೆಂಬಲವಾದರೂ ಇವರಿಗೆ ಯಾಕೆ?...

ಇದು ಚೆನ್ನಾಗಿದೆ... ಇದೇ ಇರಲಿ... ತೊಗೊಳಿ.. ಪ್ಯಾಕ್ ಮಾಡಿ.. ನಾಳೆ ರಂಗಸ್ವಾಮಿನ ಕಳಿಸ್ತೀನಿ.. ಬಿಲ್ ಸೆಟಲ್ ಮಾಡ್ತಾನೆ.. ಟ್ರೇಗೆ ಕೈ ಹಾಕಿ ಒಂದು ಪೆಂಡೆಂಟನ್ನು ತೆಗೆದು ಶೆಟ್ಟರ ಕೈಯಲ್ಲಿಟ್ಟರು.

ಇವಳನ್ನು ಸೆಲೆಕ್ಟ್ ಮಾಡಿದ್ದು ನಾನು.. ಇವಳಿಗೆ ಪೆಂಡೆಂಟನ್ನು ನಾನೇ ಸೆಲೆಕ್ಟ್ ಮಾಡಬೇಕು!... ಜೋಕೆಂಬಂತೆ ಇವರು ಹೇಳಿದಕ್ಕೆ ಸುತ್ತಾ ಇರುವವರು ನಕ್ಕರು. ನನ್ನ ಕೆನ್ನೆ ಕೆಂಪೇರಿತು. ನಿಜ. ಆದರೆ ನಾಚಿಕೆಯೋ, ಕೋಪವೋ.. ಎಂಬ ಅರಿವು ಯಾರಿಗೂ ಇಲ್ಲ... ತಮಗೆ ಬೇಕಾದಂತೆ ಅರ್ಥೈಸಿಕೊಂಡಾಗ ನಾಚಿಕೆ ಎಂಬ ತೀರ್ಮಾನಕ್ಕೆ ಬಂದು ಮತ್ತಷ್ಟು ನಗು. ಇವರಿಗೆ ಹೆಮ್ಮೆ..

ನಾನೇ ಸರಿಯಿಲ್ಲ.. ನನ್ನ ಕೆನ್ನೆಯ ಕೆಂಪು ನಾಚಿಕೆಯಿಂದಲ್ಲ, ಕೋಪದಿಂದ ಎಂಬ ಅರಿವು ಮೂಡಿಸಬೇಕು. ನಾಲಿಗೆ ಮಾತಾಡಬೇಕು. ಸ್ಪಷ್ಟವಾಗಿ.. ನನಗೆ ಬೇಕಿರುವುದು ಏನು, ನನಗೆ ಅನ್ನಿಸುತ್ತಿರುವುದು ಏನು ಎಂದು ತಿಳಿಸಬೇಕು.. ನನ್ನ ಮುಖ ಭಾವ, ಮೌನ ಅರ್ಥವಾಗುವ ಹಾಗಿದ್ದರೆ, ಅದಕ್ಕೆ ಸ್ಪಂದಿಸುವ ಮನೋಭಾವ ಇವರದಾಗಿದ್ದರೆ ನನ್ನ ಪರಿಸ್ಥಿತಿ ಹೀಗಿರುತ್ತಿರಲಿಲ್ಲ.

* * * *

(ಸಶೇಷ)

## ವಧುಪರೀಕ್ಷೆ

ಎಷ್ಟು ಸಾರಿ ಹಾಜರಾದರೂ
ಅವಳನ್ನು
ಅನುತ್ತೀರ್ಣ ಮಾಡುತ್ತಲೇ ಇದೆ
ವಧು ಪರೀಕ್ಷೆ!

★ ವಿ. ಪುಗಳೇಂದಿ

